# ಕರ್ನಾಟಕ ವಿಧಾನ ಪರಿಷತ್ತು

ವಿಷಯ: ಶ್ರೀಮತಿ ಹೆಚ್.ಎಸ್.ಶಾರದಮ್ಮ, ಸಹಾಯಕಿ ಇವರಿಗೆ ಎಚ್ಚರಿಕೆಯೊಂದಿಗೆ ಅಮಾನತ್ತಿನ ಅವಧಿಯನ್ನು "ಕೆಲಸದ ಮೇಲಿದ್ದ ಅವಧಿಯೆಂದು" ಪರಿಗಣಿಸಿ ಆದೇಶಿಸುವ ಕುರಿತು.

*****

**ಓದಲಾಗಿದೆ:**

1. ಆದೇಶ ಸಂ/ಕವಿಪ/ಆ-1/18/ಅಮಾನತ್ತು/2025-26, ದಿ:19.06.2025.
2. ಆದೇಶ ಸಂಖ್ಯೆ:ಕವಿಪ/ಆ-1/53/ಇವಿ/2025, ದಿ:28.08.2025
3. ಇಲಾಖಾ ವಿಚಾರಣೆ ವರದಿ ದಿನಾಂಕ: 31.12.2025
4. ಕಡತದ ಸಂಖ್ಯೆ:ಕವಿಪ/ಆ-1/32/ದೂರು/2025, ಕಂಡಿಕೆ ಸಂಖ್ಯೆ 38 ರಿಂದ 49 ರವರೆಗೆ.

**ಪ್ರಸ್ತಾವನೆ:**

ಓದಲಾಗಿರುವ ಕ್ರಮ ಸಂಖ್ಯೆ:(1)ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಹೆಚ್.ಎಸ್.ಶಾರದಮ್ಮ ಇವರ ವಿರುದ್ಧ ಡಾ.ಕೆ.ಎಸ್.ವೈಶಾಲಿ ಬಿನ್ ದಿವಂಗತ ಕೆ.ಹೆಚ್.ಶ್ರೀನಿವಾಸ, ಮಾನ್ಯ ಮಾಜಿ ವಿಧಾನ ಪರಿಷತ್ ಸದಸ್ಯರು ಇವರು ತಮ್ಮ ತಾಯಿಯವರಾದ ಶ್ರೀಮತಿ ಶಾಲಿನಿ ಶ್ರೀನಿವಾಸ್ ಇವರ ಕುಟುಂಬ ಪಿಂಚಣಿಯ ಕುರಿತು ಲಂಚವನ್ನು ನೀಡುವಂತೆ ಕೋರಿರುವ ಆರೋಪಗಳ ಕುರಿತು 1957ರ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 10(1)(ಸಿ) ಮತ್ತು (ಡಿ) ಹಾಗೂ 2021ನೇ ಸಾಲಿನ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳ ನಿಯಮ 12ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ದಿ:19.06.2025 ರಿಂದ ಜಾರಿಗೆ ಬರುವಂತೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಸೇವೆಯಿಂದ ಅಮಾನತ್ತಿನಲ್ಲಿಡಲಾಗಿದೆ.

ಓದಲಾಗಿರುವ ಕ್ರಮ ಸಂಖ್ಯೆ:(2)ರಲ್ಲಿ ಈ ಸಚಿವಾಲಯದ ನೋಟಿಸ್ ಸಂಖ್ಯೆ:ಕವಿಪ/ಆ-1/32/ದೂರು/2025-26 ದಿನಾಂಕ:15.07.2025ರಲ್ಲಿ 15 ದಿನದೊಳಗಾಗಿ ಲಿಖಿತ ಸಮರ್ಥನೀಯ ವಿವರಣೆಯನ್ನು ನೀಡುವಂತೆ ನೋಟೀಸ್ ಜಾರಿ ಮಾಡಲಾಗಿತ್ತು. ಅದರಂತೆ, ಸದರಿಯವರು ನೀಡಿರುವ ಪ್ರತಿರಕ್ಷಣಾ ಹೇಳಿಕೆಯು ಸಮರ್ಥನೀಯವಲ್ಲದಿರುವುದರಿಂದ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಯವರನ್ನು ನೇಮಿಸಿ ವರದಿ ನೀಡುವಂತೆ ಆದೇಶಿಸಲಾಗಿದೆ.

ಓದಲಾಗಿರುವ ಕ್ರಮ ಸಂಖ್ಯೆ:(3)ರ ಇಲಾಖಾ ವಿಚಾರಣಾ ವರದಿಯಲ್ಲಿ ವಿಚಾರಣಾಧಿಕಾರಿಗಳು ಸದರಿಯವರ ವಿರುದ್ಧ ಮಾಡಿರುವ ದೋಷಾರೋಪಣೆಗಳು ರುಜುವಾತು/ಸಾಬೀತು ಆಗಿರುವುದಿಲ್ಲವಾಗಿ ತಿಳಿಸಿರುತ್ತಾರೆ.

..2.

ಒದಲಾಗಿರುವ ಕ್ರಮ ಸಂಖ್ಯೆ:(4)ರಲ್ಲಿ ಶಿಸ್ತು ಪ್ರಾಧಿಕಾರಿಯು ಶ್ರೀಮತಿ ಹೆಚ್.ಎಸ್.ಶಾರದಮ್ಮ, ಸಹಾಯಕಿ ಇವರ ವಿರುದ್ಧ ಮಾಡಲಾದ ಆರೋಪವು ಸಾಬೀತಾಗಿಲ್ಲವೆಂದು ನಿರ್ಣಯಿಸಿರುವುದರಿಂದ ಸದರಿ ನೌಕರರನ್ನು ಆರೋಪ ಮುಕ್ತಗೊಳಿಸಿ ಅಮಾತ್ತಿನ ಆದೇಶವನ್ನು ರದ್ದುಪಡಿಸಿ ಸದರಿಯವರಿಗೆ ಎಚ್ಚರಿಕೆಯ ಸೂಚನೆಯನ್ನು ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸುವ ಪ್ರಸ್ತಾವನೆಯನ್ನು ಮಾನ್ಯ ಸಭಾಪತಿಯವರು ಅನುಮೋದಿಸಿರುತ್ತಾರೆ.

ಆದೇಶ ಸಂಖ್ಯೆ:ಕವಿಪ:ಆ-1:104:ಇವಿ:2025-26
ಬೆಂಗಳೂರು, ದಿನಾಂಕ:14.01.2026

ಮೇಲ್ಕಂಡ ಪ್ರಸ್ತಾವನೆಯ ಅಂಶಗಳ ಹಿನ್ನಲೆಯಲ್ಲಿ, ಶ್ರೀಮತಿ ಹೆಚ್.ಎಸ್.ಶಾರದಮ್ಮ, ಸಹಾಯಕಿ ಇವರ ವಿರುದ್ಧ ಮಾಡಲಾದ ಆರೋಪ ಸಾಬೀತಾಗಿಲ್ಲವೆಂದು ನಿರ್ಣಯಿಸಿರುವುದರಿಂದ ಸದರಿಯವರಿಗೆ ಇಂತಹ ಆರೋಪಗಳು ಮರುಕಳಿಸದಂತೆ ಎಚ್ಚರಿಕೆಯನ್ನು ನೀಡುತ್ತಾ, ದಿ:19.06.2025 ರಿಂದ 13.01.2026ರವರೆಗಿನ ಅಮಾನತ್ತಿನ ಅವಧಿಯನ್ನು ಕರ್ನಾಟಕ ನಾಗರಿಕ ಸೇವಾ ನಿಯಮ 100(1)ರ ಪ್ರಕಾರ "ಕೆಲಸದ ಮೇಲಿದ್ದ ಅವಧಿಯೆಂದು" ಪರಿಗಣಿಸಿ ಅಮಾನತ್ತಿನ ಆದೇಶವನ್ನು ರದ್ದುಪಡಿಸಿ ಕೂಡಲೇ ಕರ್ತವ್ಯಕ್ಕೆ ಹಾಜರಾಗಲು ಆದೇಶಿಸಲಾಗಿದೆ.

ಮಾನ್ಯ ಸಭಾಪತಿಯವರ ಆದೇಶಾನುಸಾರ,

(ಜ್ಯೋತಿ)
ಉಪ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ಗೆ,

ಶ್ರೀಮತಿ ಹೆಚ್.ಎಸ್.ಶಾರದಮ್ಮ, ನಂ.42/ಎ, ಹೆಚ್.ಎಂ.ಟಿ., ಗೃಹ, ಜಾಲಹಳ್ಳಿ, ಬೆಂಗಳೂರು-560 031.

**ಪ್ರತಿಗಳು:-**

1. ಮಾನ್ಯ ಸಭಾಪತಿಯವರ ಕಾರ್ಯದರ್ಶಿ/ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.,
2. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ.,
3. ಕಾರ್ಯದರ್ಶಿ-2ರವರ ಆಪ್ತ ಸಹಾಯಕರಿಗೆ, ಕವಿಪ.,
4. ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಆಡಳಿತ ಶಾಖೆ/ ಲೆಕ್ಕಪತ್ರಗಳ ಶಾಖೆ, ಕವಿಪ.,
5. ಖಜಾನಾಧಿಕಾರಿ/ರಾಜ್ಯ ಹುಜೂರು ಖಜಾನೆ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು, ಕವಿಮ.,
7. ಸೀನಿಯರ್ ಪ್ರೋಗ್ರಾಮರ್, ಗಣಕ ಕೇಂದ್ರ, ಕವಿಪ.,
8. ಸಂಬಂಧಪಟ್ಟ ನೌಕರರ ವೈಯಕ್ತಿಕ ಕಡತಕ್ಕೆ/ರಕ್ಷಾ ಕಡತಕ್ಕೆ/ಬಿಡಿ ಪ್ರತಿ.